**ಓಎಸ್ ನಂಃ 54/2014**
**ಡಿಡಬ್ಲೂಃ 3**

**<u>ಸಾಕ್ಷಿಗೆ ದಿನಾಂಕ 06-12-2025ರಂದು ಕರೆಯಿಸಿ ಪ್ರಮಾಣ ವಚನ ಭೋದಿಸಲಾಯಿತು</u>**

<u>ಪಾಟೀ ಸವಾಲುಃ 1ನೇ ಪ್ರತಿವಾದಿ ಪರ ಶ್ರೀ. ಎಸ್.ಎನ್.ಜೆ. ವಕೀಲರಿಂದ</u>

ನನಗೆ 1ನೇ ಪ್ರತಿವಾದಿಯ ಪರಿಚಯ ಇಲ್ಲ. ನನಗೆ ವಾದಿಯ ಪರಿಚಯವೂ ಇಲ್ಲ. ನಾನು ರಾಜಾಪುರದ ನಿವಾಸಿಯಾಗಿರುತ್ತೇನೆ. 1ನೇ ಪ್ರತಿವಾದಿ ಸಹ ರಾಜಾಪುರದ ನಿವಾಸಿ ಎಂದರೆ ಸರಿ. ವಾದಿಯ ಜಮೀನುಗಳು ರಾಜಾಪುರದಲ್ಲಿ ಇವೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಮಾಣಿಕ್ ಮಲ್ಲಪ್ಪ ಇವರ ಪರಿಚಯ ಇದೆ. 1ನೇ ಪ್ರತಿವಾದಿಯ ಜಮೀನಿನ ಪೂರ್ವ ದಿಕ್ಕಿಗೆ ಮಾಣಿಕ್ ಮಲ್ಲಪ್ಪ ಇವರ ಜಮೀನು ಇದ್ದು ಮಾಣಿಕ್ ಮಲ್ಲಪ್ಪ ಇವರ ಜಮೀನಿನ ಪೂರ್ವ ದಿಕ್ಕಿಗೆ ವಾದಿಯ ಜಮೀನು ಇದ್ದು ವಾದಿಯ ಜಮೀನಿನ ಪೂರ್ವ ದಿಕ್ಕಿಗೆ ನಿಮ್ಮ ಜಮೀನು ಇದೆ ಎಂದರೆ ಸಾಕ್ಷಿ ನಮ್ಮ ಜಮೀನಿನ ಪಶ್ಚಿಮ ದಿಕ್ಕಿಗೆ ಮಾಣಿಕ್ ಮಲ್ಲಪ್ಪರವರ ಜಮೀನು ಇದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ಸರ್ವೆ ನಂಬರ್ 195/3 ರಲ್ಲಿ 5 ಎಕ್ರೆ 10 ಗುಂಟೆ ಜಾಗದ ಮಾಲಿಕರೆಂದರೆ ನನಗೆ ಗೊತ್ತಿಲ್ಲ. ಸರ್ವೆ ನಂಬರ್ 195/3 ರಲ್ಲಿ 5 ಎಕ್ರೆ 10 ಗುಂಟೆ ಜಾಗದ ಮಾಲಿಕರೆಂದು 1998ರಿಂದ 1ನೇ ಪ್ರತಿವಾದಿಯ ಹೆಸರು ಪಹಣಿ ಪತ್ರಿಕೆಯಲ್ಲಿ ನಮೂದಾಗಿದೆ ಎಂದರೆ ನನಗೆ ಗೊತ್ತಿಲ್ಲ. ನಾನು ಸರ್ವೆ ನಂಬರ್ 195/3ನೇದರ ಪಹಣಿ ಪತ್ರಿಕೆಯನ್ನು ಪರಿಶೀಲನೆ ಮಾಡಿ ನೋಡಿಲ್ಲ. ನನ್ನ, ಮಾಣಿಕ್ ಮಲ್ಲಪ್ಪ ಮತ್ತು 1ನೇ ಪ್ರತಿವಾದಿಯ ನಡುವೆ ಜಾಗದ ಕುರಿತು ಯಾವುದೇ ದಾವೆಗಳು ಆಗಿಲ್ಲ. ನಿಮ್ಮ ಪ್ರಮಾಣ ಪತ್ರದಲ್ಲಿ 1ನೇ ಪ್ರತಿವಾದಿ ಮೋಸತನದಿಂದ ಸರ್ವೆ ನಂಬರ್ 195/3ರ ಪಹಣಿ ಪತ್ರಿಕೆಯಲ್ಲಿ ನಮೂದು ಮಾಡಿದ್ದಾರೆಂದು ಬರೆದಿದ್ದೀರಾ ಎಂದರೆ ಸಾಕ್ಷಿ ನಾನು ಆ ರೀತಿ ಏನೂ ಬರೆದಿಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ಕೇಳಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿ ನಮ್ಮ ವಕೀಲರಿಗೆ ಗೊತ್ತು ನನಗೆ ಅದರಲ್ಲಿ ಏನು ಬರೆಯಲಾಗಿದೆ ಎಂದು ಮಹಿತಿ ಇಲ್ಲ ಎಂದು ನುಡಿಯುತ್ತಾರೆ. ನಿಮ್ಮ ಪ್ರಮಾಣ ಪತ್ರದಲ್ಲಿ

ಬರೆದಿರುವ ಸಂಗತಿಗಳು ಸುಳ್ಳು ಎಂದರೆ ಸರಿಯಲ್ಲ.  ವಾದಿಯ ಮಾತು ಕೇಳಿ ಸುಳ್ಳು ಪ್ರಮಾಣಪತ್ರ ಸಲ್ಲಿಸಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.